ಮತ್ತು ಭಟ್ಕಳ, ಕರಾವಳಿ ಗುಂಟಿ ಒಟ್ಟಿಗೆ
995 ಮೀಟರನಷ್ಟು ಉದ್ದದ ಪ್ರದೇಶದಲ್ಲಿ
ಸಮುದ್ರ ಕೊರೆತ ತಡೆ ಕಾಮಗಾರಿ
ನಿರ್ವಹಿಸಿದೆ

ಈ) **2006–2007 ನೇ ಸಾಲಿನಲ್ಲಿ**

ರೂ ಲಕ್ಷಗಳಲ್ಲಿ

	ಬಿಡುಗಡೆಯಾದ ಅನುದಾನ	ಖರ್ಚು
ಉತ್ತರ ಕನ್ನಡ ಜಿಲ್ಲೆಯ ಕಾರಾವಾರ, ಅಂಕೋಲಾ, ಕುಮಟಾ, ಹೊನ್ನಾವರ ಮತ್ತು ಭಟ್ಕಳ, ಕರಾವಳಿ ಗುಂಟಿ ಒಟ್ಟಿಗೆ 1383 ಮೀಟರನಷ್ಟು ಉದ್ದದ ಪ್ರದೇಶದಲ್ಲಿ ಸಮುದ್ರ ಕೊರೆತ ತಡೆ ಕಾಮಗಾರಿ ನಿರ್ವಹಿಸಿದೆ ಮತ್ತು ಹಿಂದಿನ ಸಾಲಿನ ಬಾಕಿ ಬಿಲ್ಲು ಪಾವತಿಸಿದೆ	365 00	365 00

1556 (1947) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) .– ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಅದರಲ್ಲೂ ಮುಖ್ಯವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ 2005–06 ಮತ್ತು 2006–07 ರ ಸಾಲಿನಲ್ಲಿ ಒಟ್ಟು ಎಷ್ಟು ಕಿ ಮೀ ರಸ್ತೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ ಹಾಗೂ ಅವು ಯಾವುವು (ತಾಲ್ಲೂಕಾವಾರು ಮಾಹಿತಿ ನೀಡುವುದು),

ಆ) ನಬಾರ್ಡ್ ಹಾಗೂ ಇನ್ನಿತರ ಯೋಜನೆಗಳಿಂದ ಅಭಿವೃದ್ಧಿಗೊಂಡ ರಸ್ತೆಗಳನ್ನು ಹಾಗೂ ತಾಲ್ಲೂಕುಗಳನ್ನು ಜೋಡಿಸುವ ರಸ್ತೆಗಳನ್ನು ಮೇಲ್ದರ್ಜೇಗೇರಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು,

ಇ) ಇದರ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಮುಂದಿನ ಕ್ರಮಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು).

ಅ) 2005–06 ಮತ್ತು 2006–07 ರ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವುದೇ ರಸ್ತೆಗಳನ್ನು ಮೇಲ್ದರ್ಜೆಗೇರಿಸಿರುವುದಿಲ್ಲ

ಆ ಮತ್ತು ಇ) ಡಾ॥ ನಂಜುಂಡಪ್ಪನವರ ವರದಿಯನ್ವಯ ಪ್ರದಾಶೀಕ ಅಸಮತೋಲನ ನಿವಾರಣೆ ಕುರಿತು ನಬಾರ್ಡ್ ಹಾಗೂ ಇನ್ನಿತರೆ ಯೋಜನೆಗಳಿಂದ ಅಭಿವೃದ್ಧಿಗೊಂಡ ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

1557 (1923) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) – ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕ್ರೀಡಾಂಗಣಗಳ ಸಂಖ್ಯೆಗಳು ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಈ ಕ್ರೀಡಾಂಗಣಗಳಲ್ಲಿ ಉಪಯೋಗದಲ್ಲಿರುವುವು ಎಷ್ಟು,

ಇ) ರಾಜ್ಯದಲ್ಲಿರುವ ಹಾಕಿ ಕ್ರೀಡಾಂಗಣಗಳು, ಮುಖ್ಯವಾಗಿ ಕೊಡಗು ಜಿಲ್ಲೆಯಲ್ಲಿ,

ಈ) ಈ ರಾಜ್ಯದಲ್ಲಿರುವ ಕ್ರೀಡಾಂಗಣಗಳ ಸ್ಥಿತಿ,

ಉ) ಒಂದು ಕಾಲದಲ್ಲಿ ಒಲಂಪಿಕ್ಸ್ ಮತ್ತು ವಿಶ್ವಕಪ್‌ನಲ್ಲಿ ರಾಜ್ಯದ ಕ್ರೀಡಾಪಟುಗಳು ಪ್ರಭುತ್ವ ಸಾಧಿಸಿದ ಹಾಕಿ ಕ್ರೀಡೆಯನ್ನು ಸುಧಾರಿಸುವ ನಿಟ್ಟಿನಲ್ಲಿ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ,

ಊ) ನಮ್ಮ ದೇಶವನ್ನು ಪ್ರತಿನಿಧಿಸುವ ರಾಜ್ಯದ ಕ್ರೀಡಾಪಟುಗಳಿಗೆ ಯಾವ ಸವಲತ್ತುಗಳನ್ನು ನೀಡಲಾಗುತ್ತಿದೆ,